ದಿನಾಂಕ : 06.11.2021 ಓ.ಎಸ್ ನಂ.04/2012 ರಲ್ಲಿ

ಡಿ.ಡಬ್ಲ್ಯೂ-1(ಅಶೋಕ್‌ಕುಮಾರ್ ಗಾಂಧಿ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಎ.ಎನ್.ಕೆ ವಕೀಲರಿಂದಃ

ನಿಡಿ-18 ರ ಛಾಪಾ ಕಾಗದವನ್ನು ನಾನೇ ಖರೀದಿಸಿದ್ದೆ. ದಿನಾಂಕ 19.01.2007 ಅಥವಾ ಅದಕ್ಕಿಂತ ಮೊದಲು ನಾನು ಸದರಿ ಛಾಪಾ ಕಾಗದವನ್ನು ಖರೀದಿಸಿದ್ದೆ. ಮಲ್ಲೇಶ್ವರಂನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ನಾನು ಛಾಪಾ ಕಾಗದವನ್ನು ಖರೀದಿಸಿದ್ದೆ. ಆ ದಿನ ನಾನು ಒಟ್ಟು 220/- ರೂಪಾಯಿ ಮುಖಬೆಲೆಯ ಛಾಪಾ ಕಾಗದವನ್ನು ಖರೀದಿಸಿದ್ದೆ. ನಾನು ಮೂರು ಹಾಳೆಗಳ ಛಾಪಾ ಕಾಗದವನ್ನು ಖರೀದಿಸಿದ್ದೆ. ಆ ದಿನ ನಾನು ಎಷ್ಟು ಗಂಟೆಗೆ ಛಾಪಾ ಕಾಗದವನ್ನು ಖರೀದಿಸಿದ್ದೆ ಎಂದರೆ ನಿಖರವಾದ ಸಮಯ ಜ್ಞಾಪಕವಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಯಾರು ಛಾಪಾ ಕಾಗದವನ್ನು ಕೊಡುತ್ತಾರೋ ಅವರೇ ಛಾಪಾ ಕಾಗದದಲ್ಲಿ ವಿವರಗಳನ್ನು ಭರ್ತಿ ಮಾಡಿಕೊಡುತ್ತಾರೆ ಎಂದರೆ ಸರಿ. ನಿಡಿ-18 ರಲ್ಲಿ 4 ನೇ ಪ್ರತಿವಾದಿಯ ಮೊಹರು ಮತ್ತು ವಿಳಾಸವಿದೆ ಎಂದರೆ ಸರಿ. ಸದರಿ ಮೊಹರನ್ನು ನಾನು ನನ್ನ ಕಛೇರಿಯಲ್ಲಿ ಹಾಕಿದ್ದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು Issuing Authority ಹೆಸರು ಮತ್ತು ವಿಳಾಸ ಕೇಳಿದಾಗ ನಾನು ನನ್ನ ಬಳಿ ಮೊಹರು ಮತ್ತು ವಿಳಾಸ ಇದ್ದ ಬಗ್ಗೆ ಹೇಳಿದ್ದು, ಅವರು ಅದನ್ನೇ ಹಾಕುತ್ತೇನೆ ಎಂದು ಹೇಳಿದ್ದು, ಅವರೇ ಸದರಿ ಮೊಹರನ್ನು ಹಾಕಿದ್ದರು ಎಂದು ನುಡಿಯುತ್ತಾರೆ. ನನ್ನ ಕಛೇರಿಗೂ 4 ನೇ ಪ್ರತಿವಾದಿಯ ಕಛೇರಿಗೂ ಮತ್ತು ಮಲ್ಲೇಶ್ವರಂಗೂ 6 ಕಿ.ಮೀ ಅಂತರವಿದೆ ಎಂದರೆ ಸಾಕ್ಷಿಯು ಸುಳ್ಳು, 4 ಕಿ.ಮೀ ಎಂದು ನುಡಿಯುತ್ತಾರೆ. ನಾನು ನನ್ನ

ದಿನಾಂಕ : 06.11.2021 ಓ.ಎಸ್ ನಂ.04/2012 ರಲ್ಲಿ

ಡಿ.ಡಬ್ಲ್ಯೂ-1(ಅಶೋಕ್‌ಕುಮಾರ್ ಗಾಂಧಿ)

ಕಛೇರಿಯಲ್ಲಿ ಖಾಲಿ ಛಾಪಾ ಕಾಗದವನ್ನು ಇಟ್ಟುಕೊಂಡಿದ್ದು, ನಾನೇ ನಿಡಿ-18 ದಾಖಲೆಗೆ ಮೊಹರು ಹಾಕಿದ್ದೆ ಎಂದರೆ ಸರಿಯಲ್ಲ. ನಿಡಿ-18 ಕ್ರಯದ ಕರಾರನ್ನು ಯಾರು ತಯಾರಿಸಿದ್ದರು ಎಂದರೆ ಸಾಕ್ಷಿಯು ನಾನು ಮತ್ತು 1 ನೇ ಪ್ರತಿವಾದಿ ಸೇರಿ ಒಪ್ಪಿಕೊಂಡ ಷರತ್ತುಗಳನ್ನು ಒಂದು ಬಿಳಿ ಹಾಳೆಯ ಮೇಲೆ ಬರೆದಿದ್ದು, ಅದನ್ನು 1 ನೇ ಪ್ರತಿವಾದಿ ಯಾರ ಬಳಿ ಪ್ರಿಂಟ್ ಹಾಕಿಸಿದ್ದರೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-18 ಕ್ರಯದ ಕರಾರನ್ನು ಬೆಂಗಳೂರಿನಲ್ಲಿ ಪ್ರಿಂಟ್ ಹಾಕಿಸಿದ್ದರು.

ನಿಡಿ-18 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. ನಿಡಿ-18 ರಲ್ಲಿ ಸರ್ವೇ ಮಾಡುವ ಬಗ್ಗೆ ಬರೆದಿದ್ದು, ಅದರಂತೆ ಅರ್ಜಿ ಸಲ್ಲಿಸಿದ್ದು ಅದರಂತೆ ಪೋಡಿ ಕೂಡ ಆಗಿದೆ ಎಂದು ಸಾಕ್ಷಿಯು ನುಡಿಯುತ್ತಾರೆ. ಯಾವ ವರ್ಷ ಪೋಡಿಯಾಗಿದೆ ಎಂದು ಜ್ಞಾಪಕವಿಲ್ಲ. ಪೋಡಿ ಮಾಡಿದ ಬಗ್ಗೆ ನನ್ನ ಬಳಿ ದಾಖಲೆ ಇದೆಯಾ ಎಂದರೆ ಪರಿಶೀಲಿಸಬೇಕು ಎಂದು ಸಾಕ್ಷಿಯು ನುಡಿಯುತ್ತಾರೆ. ಕರಾರಿನಲ್ಲಿ ಭೂಪರಿವರ್ತನೆ ಮಾಡಿಕೊಡುವ ಬಗ್ಗೆ ನಮೂದಿಸಿದ್ದು, ಯಾರು ಭೂಪರಿವರ್ತನೆ ಮಾಡಿಸಿಕೊಡಬೇಕಿತ್ತು ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ಭೂಪರಿವರ್ತನೆ ಮಾಡಿಸಿಕೊಡಲು ಒಪ್ಪಿದ್ದರು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಭೂಪರಿವರ್ತನೆ ಮಾಡುವ ಬಗ್ಗೆ ಸಂಬಂಧಪಟ್ಟ ಇಲಾಖೆಯಲ್ಲಿ ಕೇಳಿರಲಿಲ್ಲ ಎಂದು ಕಾಣುತ್ತದೆ. ನಿಡಿ-18 ರ ಪ್ರಕಾರ 5 ತಿಂಗಳ ಒಳಗೆ ಕ್ರಯಪತ್ರವಾಗಬೇಕಿತ್ತು ಎಂದರೆ ಸಾಕ್ಷಿಯು ನಿಡಿ-18 ದಾಖಲೆಯನ್ನು ನೋಡಿ 5 ತಿಂಗಳ ಒಳಗೆ ವ್ಯವಹಾರವಾಗಬೇಕು ಎಂದಲ್ಲ, 5 ತಿಂಗಳ ಒಳಗೆ ಭೂಪರಿವರ್ತನೆ ಮಾಡಿಸಿ ನಂತರ ಲಿಖಿತವಾಗಿ ತಿಳಿಸಿದ ಮೇರೆಗೆ ನಾವು ಹೇಳಿದಾಗ ಅವರು ಬಂದು ನೋಂದಣಿ ಮಾಡಿಕೊಡುತ್ತಾರೆ ಎಂದು ಬರೆದಿದೆ

ಎಂದು ನುಡಿಯುತ್ತಾರೆ. ನಾನು 1 ನೇ ಪ್ರತಿವಾದಿಗೆ ಭೂಪರಿವರ್ತನೆ ಮಾಡಿಸಿಕೊಡುವಂತೆ 5 ತಿಂಗಳ ಒಳಗೆ ಲಿಖಿತ ರೂಪದಲ್ಲಿ ಪತ್ರ ಕೊಟ್ಟಿದ್ದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಬಹುದು.

ದಿನಾಂಕ 19.01.2007 ರಲ್ಲಿ ನಿಡಿ-22 ನೋಂದಣಿ ಆಗಿರಲಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ವಿಭಾಗಪತ್ರ ನೋಂದಣಿ ಆಗಿರಲಿಲ್ಲ, ಮೌಖಿಕ ವಿಭಾಗದ ಆಧಾರದಲ್ಲಿ ಈ ಅನುಸೂಚಿ ಸ್ವತ್ತು ಅವರ ಹೆಸರಿನಲ್ಲಿ ಪಹಣಿಯಲ್ಲಿ ಬಂದಿತ್ತು ಎಂದು ನುಡಿಯುತ್ತಾರೆ. ದಿನಾಂಕ 19.01.2007 ರಲ್ಲಿ 1 ನೇ ಪ್ರತಿವಾದಿ ದಾವಾ ಅನುಸೂಚಿ ಸ್ವತ್ತಿನ ಮಾಲಿಕರಾಗಿರಲಿಲ್ಲ ಎಂದರೆ ಸರಿಯಲ್ಲ. ನಿಡಿ-18 ರಲ್ಲಿ 1 ನೇ ಪ್ರತಿವಾದಿಗೆ ಯಾವ ರೀತಿ ಆಸ್ತಿ ಬಂತು ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ನಿಡಿ-18 ನ್ನು ನೋಡಿ ಇದರಲ್ಲಿ ಬರೆದಿಲ್ಲ ಎಂದು ನುಡಿಯುತ್ತಾರೆ. ನಿಡಿ-18 ರಲ್ಲಿ 1 ನೇ ಪ್ರತಿವಾದಿ ಯಾವ ಉದ್ದೇಶಕ್ಕೆ ಆಸ್ತಿ ಮಾರಾಟ ಮಾಡುತ್ತಿದ್ದಾರೆ ಎಂದು ನಮೂದಿಸಿಲ್ಲ ಎಂದರೆ ಬರೆದಿದ್ದಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. 1 ನೇ ಪ್ರತಿವಾದಿ ಕನ್ನಡದಲ್ಲಿ ಸಹಿ ಮಾಡುತ್ತಾರೆ ಎಂದರೆ ಸರಿ. ನಿಡಿ-18 ರ ಪ್ರತೀ ಪುಟದಲ್ಲೂ ಇರುವ ಹೆಬ್ಬೆಟ್ಟಿನ ಗುರುತು 1 ನೇ ಪ್ರತಿವಾದಿಯದ್ದಾಗಿರುತ್ತದೆ. ನಿಡಿ-18 ರಲ್ಲಿರುವ ಹೆಬ್ಬೆಟ್ಟಿನ ಗುರುತುಗಳು ಯಾರದ್ದು ಎಂದು ಬರೆದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ದಾಖಲೆಗಳನ್ನು ತಿದ್ದುಪಡಿ ಮಾಡಿದಾಗ ಆ ಬಗ್ಗೆ ಸಹಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-18 ರ ಪುಟ ಸಂಖ್ಯೆ 1 ಮತ್ತು 3 ರಲ್ಲಿ ಯಾವುದೇ ತಿದ್ದುಪಡಿಯಿಲ್ಲದಿದ್ದರೂ 1 ನೇ ಪ್ರತಿವಾದಿ ಸಹಿ ಮತ್ತು ಹೆಬ್ಬೆಟ್ಟಿನ ಗುರುತು ಹಾಕಿದ್ದಾರೆ ಎಂದರೆ

ಸಾಕ್ಷಿಯು ದಾಖಲೆಯನ್ನು ನೋಡಿ ಹಾಕಿದ್ದಾರೆ ಎಂದು ನುಡಿಯುತ್ತಾರೆ. ನಿಡಿ-18 ಕ್ರಯದ ಕರಾರು ಆದ ದಿನ ಅಲ್ಲಿ ಅಣ್ಣಯ್ಯ, ಕೆಂಪಣ್ಣ ಮತ್ತು ರಾಜಣ್ಣ ಸಾಕ್ಷಿದಾರರಾಗಿದ್ದರು. ನಿಡಿ-18 ಆದ ದಿನ ನನಗೆ ಅಣ್ಣಯ್ಯನವರ ಪರಿಚಯ ಚೆನ್ನಾಗಿತ್ತು, ಕೆಂಪಣ್ಣ ಮತ್ತು ರಾಜಣ್ಣನವರನ್ನು 1ನೇ ಪ್ರತಿವಾದಿ ಕರೆದುಕೊಂಡು ಬಂದಿದ್ದರು. ಈಗ ಕೆಂಪಣ್ಣ ಮತ್ತು ರಾಜಣ್ಣ ನನ್ನೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದರೆ ಇದ್ದಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ಕೆಂಪಣ್ಣ ಮತ್ತು ರಾಜಣ್ಣನವರನ್ನು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿಸಲು ನನಗೆ ತೊಂದರೆ ಇಲ್ಲ ಎಂದರೆ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಅಣ್ಣಯ್ಯ ಕೆಲಸ ಮಾಡುವ ಕಛೇರಿ ಬೆಂಗಳೂರಿನಲ್ಲಿ 4ನೇ ಪ್ರತಿವಾದಿ ಕಛೇರಿಯ ಸಮೀಪದಲ್ಲಿದೆ. ನಿಡಿ-18 ರಲ್ಲಿ 1ನೇ ಸಾಕ್ಷಿದಾರರ ಸಹಿ ಮತ್ತು 2ನೇ ಸಾಕ್ಷಿದಾರರ ಸಹಿಯ ನಡುವೆ ಸಾಕಷ್ಟು ಅಂತರವಿದೆ ಎಂದರೆ ಸರಿ.

ನಿಡಿ-18 ಕ್ರಯದ ಕರಾರು ಆಗಿದೆ ಎಂದು ಹೇಳುವ ದಿನಾಂಕದಂದು ದಾವಾ ಸ್ವತ್ತಿನಲ್ಲಿ 17 ಗುಂಟೆ ಬೆಂಗಳೂರು-ಮೈಸೂರು ಹೆದ್ದಾರಿಗೋಸ್ಕರ ಭೂಸ್ವಾಧೀನಗೊಂಡಿತ್ತು ಎಂದರೆ ಸಾಕ್ಷಿಯ ದಾವಾ ಸರ್ವೇ ನಂಬರ್‌ನಲ್ಲಿ ಒಟ್ಟು 4 ಎಕರೆ ಜಮೀನಿದ್ದು, ಅದರಲ್ಲಿ 17 ಗುಂಟೆ ಭೂಸ್ವಾಧೀನಗೊಂಡಿರಬಹುದು ಆದರೆ ದಾವಾ ಸ್ವತ್ತಿನಲ್ಲಿ 7 ಗುಂಟೆ ಮಾತ್ರ ಭೂಸ್ವಾಧೀನಗೊಂಡಿತ್ತು ಎಂದು ನುಡಿಯುತ್ತಾರೆ.

ನಿಡಿ-18ರ ಪುಟ ಸಂಖ್ಯೆ 4ರ ಹಿಂಭಾಗದಲ್ಲಿರುವ ಬರವಣಿಗೆ 1ನೇ ಪ್ರತಿವಾದಿಯದ್ದಾಗಿರುತ್ತದೆ. ಸದರಿ ಹಿಂಬರಹ ಬರೆದಾಗ ನಾನು, ನನ್ನ ಸಹೋದರ, 1ನೇ ಪ್ರತಿವಾದಿ ಮತ್ತು ಅವರ ಸ್ನೇಹಿತರು ಇದ್ದರು. ಹಿಂಬರಹ ಬರೆದ ದಿನ 1ನೇ ಪ್ರತಿವಾದಿಯ ಸ್ನೇಹಿತರ ಸಹಿಗಳನ್ನು

ದಿನಾಂಕ ಃ 06.11.2021 ಓ.ಎಸ್ ನಂ.04/2012 ರಲ್ಲಿ
ಡಿ.ಡಬ್ಲ್ಯೂ-1(ಅಶೋಕ್‌ಕುಮಾರ್ ಗಾಂಧಿ)

ಸಾಕ್ಷಿಗಳಾಗಿ ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ತೊಂದರೆ ಇರಲಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಹಿಂಬರಹದಲ್ಲಿ 1 ನೇ ಪ್ರತಿವಾದಿ ಮತ್ತು ಲಲಿತಾ ನಾವುಗಳು ಎಂದು ಬರೆದಿದ್ದು, ಲಲಿತಾ ಎನ್ನುವವರ ಸಹಿ ಅಲ್ಲಿ ಇಲ್ಲ ಎಂದರೆ ಸರಿ. 1 ನೇ ಪ್ರತಿವಾದಿಗೆ ಸಹಿ ಮಾಡುವುದನ್ನು ಬಿಟ್ಟರೇ ಕನ್ನಡದಲ್ಲಿ ಬರೆಯಲು ಗೊತ್ತಿಲ್ಲ ಎಂದರೆ ಸರಿಯಲ್ಲ. ದಿನಾಂಕ 24.07.2007 ರಲ್ಲಿ 1 ನೇ ಪ್ರತಿವಾದಿ ನನ್ನನ್ನು ಭೇಟಿಯಾಗಿರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 19.01.2007 ರಲ್ಲಿ 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಗಳು ನನಗೆ ನಿಡಿ-18 ಕ್ರಯದ ಕರಾರನ್ನು ಬರೆದುಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯ ಬಳಿ ಖಾಲಿ ಛಾಪಾ ಕಾಗದಕ್ಕೆ ಸಹಿಗಳನ್ನು ಪಡೆದುಕೊಂಡು ಕ್ರಯದ ಕರಾರು ಎಂದು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

ನಿಡಿ-19 ರ ಛಾಪಾ ಕಾಗದವನ್ನು ನಾನು ಖರೀದಿಸಿದ್ದೆ. ಸಾಮಾನ್ಯವಾಗಿ ಯಾರು ಖರೀದಿ ಮಾಡುತ್ತಾರೋ ಅವರ ಹೆಸರನ್ನು ಛಾಪಾ ಕಾಗದದಲ್ಲಿ ನಮೂದಿಸುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನನಗೆ ಫೈನಾನ್ಸ್ ವ್ಯವಹಾರದ ಬಗ್ಗೆ ಚೆನ್ನಾಗಿ ಗೊತ್ತಿದೆ ಎಂದರೆ ಸರಿಯಲ್ಲ. ನಿಡಿ-19 ರಲ್ಲಿ ಶಂಕರ್‌ಕುಮಾರ್ ಗೌಡ ಎಂದು ಬರೆದಿದೆ ಎಂದರೆ ಸಾಕ್ಷಿಯು ಅದು ಅಶೋಕ್ ಕುಮಾರ್ ಗಾಂಧಿ ಎಂದು ನುಡಿಯುತ್ತಾರೆ. ದಿನಾಂಕ 09.01.2007 ರಂದು ನಿಡಿ-19 ರ ಛಾಪಾ ಕಾಗದವನ್ನು ಖರೀದಿಸಲಾಗಿತ್ತು ಎಂದರೆ ಸಾಕ್ಷಿಯು ಅಸಲು ದಾಖಲೆಯನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ.

ದಿನಾಂಕ : 06.11.2021 ಓ.ಎಸ್ ನಂ.04/2012 ರಲ್ಲಿ

ಡಿ.ಡಬ್ಲ್ಯೂ-1(ಅಶೋಕ್‌ಕುಮಾರ್ ಗಾಂಧಿ)

ನಿಡಿ-19 ನ್ನು ಯಾರು ತಯಾರಿಸಿದ್ದರು ಎಂದರೆ ಸಾಕ್ಷಿಯು ನಾನು ಮತ್ತು 1 ನೇ ಪ್ರತಿವಾದಿ ಸೇರಿ ಒಪ್ಪಿಕೊಂಡ ಷರತ್ತುಗಳನ್ನು ಒಂದು ಬಿಳಿ ಹಾಳೆಯ ಮೇಲೆ ಬರೆದಿದ್ದು, ಅದನ್ನು 1 ನೇ ಪ್ರತಿವಾದಿ ಪ್ರಿಂಟ್ ಹಾಕಿಸಿಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ದಿನಾಂಕ 19.01.2007 ರಂದೇ ಸಹಿ ಮಾಡಲಾಗಿತ್ತು. ನಿಡಿ-19 ನ್ನು ಎಲ್ಲಿ ನೋಟರಿ ಮಾಡಿಸಲಾಗಿತ್ತು ಎಂದು ಜ್ಞಾಪಕವಿಲ್ಲ. ಸಾಮಾನ್ಯವಾಗಿ ಸಾಮಾನ್ಯ ಅಧಿಕಾರ ಪತ್ರವನ್ನು ನೋಟರಿ ಮಾಡಿಸುವಾಗ ಪಕ್ಷಗಾರರು ನೋಟರಿಯವರ ಮುಂದೆ ಹಾಜರಿರಬೇಕು ಎಂದರೆ ಸರಿ. ದಿನಾಂಕ 09.02.2007 ರಂದು ಸದರಿ ದಾಖಲೆ ನೋಟರೈಸ್ಡ್ ಆಗಿತ್ತು ಎಂದರೆ ಸರಿ. ಆ ದಿನ ನೋಟರಿಯವರ ಮುಂದೆ ಯಾರು ಯಾರು ಬಂದಿದ್ದರು ಎಂದು ಜ್ಞಾಪಕವಿಲ್ಲ. ನಿಡಿ-19 ರಲ್ಲಿ ತಿದ್ದುಪಡಿಯಿಲ್ಲದಿದ್ದರೂ ಸದರಿ ದಾಖಲೆಯ ಪ್ರತೀ ಪುಟದಲ್ಲೂ 1 ನೇ ಪ್ರತಿವಾದಿಯ ಕ್ರಾಸ್ ಸಹಿ ಮತ್ತು ಹೆಬ್ಬೆಟ್ಟಿನ ಗುರುತನ್ನು ಮಾಡಿಸಿದ್ದೇವೆ ಎಂದರೆ ಸಾಕ್ಷಿಯು ನಿಡಿ-19 ನ್ನು ನೋಡಿ 1 ನೇ ಪ್ರತಿವಾದಿ ಆ ರೀತಿ ಹೆಬ್ಬೆಟ್ಟಿನ ಗುರುತು ಹಾಕಿ ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.